ಇ) ಕರ್ನಾಟಕ ಆಹಾರ ನಿಗಮದಲ್ಲಿ ಇರುವ ಹರಿಜನ ಗಿರಿಜನಗಳ ಹುದ್ದೆಗಳೆಷ್ಟು? ಅವುಗಳನ್ನು ರೋಸ್ಟರ್ ಪದ್ಧತಿ ಮೂಲಕ ನೇಮಕಾತಿ ಮಾಡಲಾಗಿದೆಯೇ? (ಸಂಕ್ಷಿಪ್ತ ನೇಮಕಾತಿ ಹೆಸರುಗಳನ್ನು ಕೊಡಿ)

ಶ್ರೀ ಟಿ.ಎನ್. ನರಸಿಂಹಮೂರ್ತಿ, (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ) 1973ರಲ್ಲಿ ನಿಗಮವು ಸ್ಥಾಪಿಸಲಾಗಿದ್ದು ಒಟ್ಟು 1400 ಜನ ಸಿಬ್ಬಂದಿಗಳನ್ನು ನೇಮಕ ಮಾಡಲಾಗಿದೆ.

ವರ್ಗವಾರು ವಿವರ	
1ನೇ ದರ್ಜೆ	19
2ನೇ ದರ್ಜೆ	33
3ನೇ ದರ್ಜೆ	837
4ನೇ ದರ್ಜೆ	515
ಒಟ್ಟು	1404

1978ರಲ್ಲಿ ರೋಸ್ಟರ್ ಪದ್ಧತಿ ಜಾರಿಗೆ ಬಂದ ನಂತರ ಅನುಸರಿಸಲಾಗಿದೆ.

ಆ) ಪ್ರಶ್ನೆ (ಅ)ಗೆ ನೀಡಿರುವ ಉತ್ತರದ ನಿಮಿತ್ತ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಒಟ್ಟು ಹುದ್ದೆಗಳು — 251

ಭರ್ತಿ ಮಾಡಿರುವ ಒಟ್ಟು ಹುದ್ದೆಗಳು ಕೆಳಕಂಡಂತಿವೆ.

ಗ್ರೂಪ್ ಎ	4
ಗ್ರೂಪ್ ಬಿ	4
ಗ್ರೂಪ್ ಸಿ	132
ಗ್ರೂಪ್ ಡಿ	61
ಒಟ್ಟು	201

ಜಿಲ್ಲಾ ಸಹಕಾರಿ ಕೇಂದ್ರ ಬ್ಯಾಂಕುಗಳಿಗೆ ಕೆ.ಎ.ಎಸ್. ಅಧಿಕಾರಿಗಳ ನೇಮಕ.

1464 – ಶ್ರೀ ಆರ್.ಎನ್. ನಾಯಕ್(ಭಟ್ಕಳ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದ ಎಷ್ಟು ಡಿಸ್ಟ್ರಿಕ್ಟ್ ಸೆಂಟ್ರಲ್ ಕೋ-ಆಪರೇಟಿವ್ ಬ್ಯಾಂಕುಗಳಲ್ಲಿ ಕೆ.ಎ.ಎಸ್. ಅಧಿಕಾರಿಗಳಲ್ಲದವರು ಕೆಲಸ ಮಾಡುತ್ತಿದ್ದಾರೆ?

ಆ) ಕೆ.ಎ.ಎಸ್. ಅಧಿಕಾರಿಗಳಿಲ್ಲದ ಸ್ಥಳಗಳಲ್ಲಿ ಅಂಥ ಅಧಿಕಾರಿಗಳನ್ನು ನೇಮಿಸಲು ಸರ್ಕಾರಕ್ಕೆ ಇರುವ ತೊಂದರೆ ಏನು?

ಶ್ರೀ ಕೆ.ಹೆಚ್. ಪಾಟೀಲ್. (ಸಹಕಾರ ಮಂತ್ರಿಗಳು) :

ಅ) ರಾಜ್ಯದ ಎಲ್ಲಾ ಡಿಸ್ಟ್ರಿಕ್ಟ್ ಸೆಂಟ್ರಲ್ ಕೋ ಆಪರೇಟಿವ್ ಬ್ಯಾಂಕುಗಳಲ್ಲಿ ಕೆ.ಎ.ಎಸ್. ಅಧಿಕಾರಿಗಳಲ್ಲದವರೇ ಕಾರ್ಯ ನಿರ್ವಹಿಸುತ್ತಿದ್ದಾರೆ.

ಆ) ಸಹಕಾರ ಇಲಾಖೆಯ ಅಧಿಕಾರಿಗಳನ್ನು (ಕೆ.ಸಿ.ಎಸ್) ನೇಮಕ ಮಾಡುವ ಬಗ್ಗೆ ಎನ್‌ಕೇಡರ್ ಆಗಿರುತ್ತದೆ. ಕೆ.ಎ.ಎಸ್. ಅಧಿಕಾರಿಗಳನ್ನು ನೇಮಕ ಮಾಡುವ ಬಗ್ಗೆ ಅವಕಾಶವಿರುವುದಿಲ್ಲ.